ಶ್ರೀ ವಿ. ಆರ್. ನಾಯ್ಡು.—1946 ನೆಯ ಇಸವಿಯಿಂದ 1952ರ ವರೆಗೆ ಅಂಕಿ ಅಂಶಗಳನ್ನು ನೋಡಿದರೆ ಸುಮಾರು ಎರಡೂವರೆ ಲಕ್ಷ ರೂಪಾಯಿಗಳು ಖರ್ಚಾಗಿವೆ. ಸುಧಾರಣೆ ಮಾಡಿದ ಭಿಕ್ಷುಕರ ಸಂಖ್ಯೆ 612 ಎಂದಿದೆ. ಅವರು ಯಾರು, ಯಾವರೀತಿ ಸುಧಾರಣೆ ಮಾಡಿದ್ದೀರಿ ಎಂಬುದು ಇದರಿಂದ ಗೊತ್ತಾಗುವುದಿಲ್ಲ. ಈ 612 ಜನರಿಗೆ ಎರಡೂವರೆ ಲಕ್ಷ ರೂಪಾಯಿ ಖರ್ಚಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚಾಗಿದೆ.

ಶ್ರೀ ವಿ. ಆರ್. ನಾಯ್ಡು.—ಕೇವಲ 612 ಜನರಿಗಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿರುವುದು ಬಹಳ ಅನ್ಯಾಯವಲ್ಲವೆ?

Sri Kadidal MANJAPPA.—It is a matter of opinion.

ಶ್ರೀ ವಿ. ಆರ್. ನಾಯ್ಡು.—ಈ ಭಿಕ್ಷುಕರ ಕಾಲೊನಿಗಾಗಿ ಇಷ್ಟೊಂದು ಹಣ ಅನ್ಯಾಯವಾಗಿ ಖರ್ಚಾಗುತ್ತಿರುವುದರಿಂದ ಇದನ್ನು ಆದಷ್ಟು ಬೇಗ ವಜಾಮಾಡುವುದು ಉತ್ತಮವಲ್ಲವೆ?

Mr. SPEAKER.—All that has been answered yesterday.

Extent of loss of Paddy and Ragi crops in Shimoga Taluk

Q.—449 **Sri S. R. NAGAPPA SETTY** (Shimoga).—

Will the Government be pleased to state :—

(*a*) the number of acres of paddy and ragi crops lost due to failure of rains in Shimoga Taluk;

(*b*) what relief has been granted to these raiyats ?

A.—**Sri Kadidal MANJAPPA** (Minister for Revenue and Public Works).—

(*a*) An extent of about 10,000 acres of paddy is reported to have been adversely affected. The precise extent of loss cannot yet be ascertained as the season is not over. No loss of ragi crop is reported.

(*b*) Seasonal remissions wherever necessary will be sanctioned under the rules.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಹೋದ ತಿಂಗಳು, ಮಳೆಬರುವುದಕ್ಕೆ ಮುಂಚೆ ಪೈರು ಒಣಗಿತೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಒಣಗಿತ್ತು.

ಶ್ರೀ ಎಸ್ ಆರ್. ನಾಗಪ್ಪ ಶೆಟ್ಟಿ.—ಸುಮಾರು ಹತ್ತು ಸಾವಿರ ಎಕರೆ ಬೆಳೆ ಹೋಗಿತ್ತೆಂದು ಹೇಳಿದೆ. ಇದರಿಂದ ಎಷ್ಟು ಪ್ರಜಾ ಸಂಖ್ಯೆಗೆ ತೊಂದರೆಯಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಪೈರು ಹೋಗಿರುವ ಸ್ಥಳಗಳಲ್ಲಿರುವ ಪ್ರಜೆಗಳಿಗೆ ಮುಂದಿನ ವರ್ಷ ಆಹಾರ ಸರಬರಾಯಿಮಾಡಲು ಏರ್ಪಾಡುಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಕಡೆಯೂ ಮಾಡಿದ ಹಾಗೆ ಅಲ್ಲಿಯೂ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಡೀಕಂಟ್ರೋಲ್‌ಮಾಡಿದ ಮೇಲೆ ಅಂಥ ಹಳ್ಳಿಗಳಿಗೆ ಸರಬರಾಯಿಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಅಲ್ಲಿಯ ಜನರಿಗೆ ಏನಾದರೂ ಕೆಲಸಗಳನ್ನೊದಗಿಸಲು ಪ್ರಯತ್ನಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತುಂಗಾ ಆಣೆಕಟ್ಟಿನ ಕೆಲಸ ನಡೆಯುತ್ತಿದೆ, ಎಷ್ಟು ಜನರನ್ನಾದರೂ ಅಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ.

Raising the bund of Sankighatta Tank in Magadi Taluk

Q.—486. **Sri S. SIDDAPPA** (Magadi).—